# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 1
Volume 1 Issue 1
ಮಂಗಳವಾರ 01-09-2015
Email: mahilavishesha@yahoo.com

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444

ಮೈಸೂರು
ಪುಟ 4
ಬೆಲೆ ₹2


## ಮಹಿಳಾ ಚರ್ಚಿನಲ್ಲಿ ತಾಯಿ ಮೇರಿ ಹಬ್ಬ

ಮೈಸೂರಿನ ಶ್ರೀರಾಮಪುರದಲ್ಲಿರುವ ಮಹಿಳಾ ಚರ್ಚಿನಲ್ಲಿ ತಾಯಿ ಮೇರಿಯವರ ಹುಟ್ಟುಹಬ್ಬವನ್ನು ಸೆಪ್ಟೆಂಬರ್ 8ರಂದು ಆಚರಿಸಲಾಗುವುದು ಹಾಗೂ ಆಗಸ್ಟ್ 30 ರಿಂದ ಸೆಪ್ಟೆಂಬರ್ 8ರವರೆಗೆ ಪ್ರತಿನಿತ್ಯ ಸಂಜೆ 5.30ಕ್ಕೆ ಪ್ರಾರ್ಥನೆ ಉತ್ಸವ, ಇತ್ಯಾದಿ ಕಾರ್ಯಕ್ರಮಗಳಿದ್ದು ಸಿಹಿಯನ್ನು ಹಂಚಲಾಗುವುದೆಂದು ಬಲ್ಲ ಮೂಲಗಳಿಂದ ಮಾಹಿತಿ ತಿಳಿದಿದೆ.

## ಬ್ರಹ್ಮಕುಮಾರಿಯವರಿಂದ ರಕ್ಷಾಬಂಧನ

ಚಾಮರಾಜನಗರದ ಜಿಲ್ಲಾಧಿಕಾರಿ ಕಛೇರಿ ಹಾಗೂ ಇತರ ಸರ್ಕಾರಿ ಕಛೇರಿಗಳಿಗೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಕಾರ್ಯಕರ್ತರು ತೆರಳಿ ಅಲ್ಲಿನ ಅಧಿಕಾರಿ, ಸಿಬ್ಬಂದಿಗಳಿಗೆ ವಿಶ್ವಭ್ರಾತೃತ್ವ ಸ್ನೇಹ ಸೂಚಕ ರಾಖಿ ಕಟ್ಟಿ ತಿಲಕ ಇಟ್ಟು ಸಿಹಿ ನೀಡಿ ಸಂಭ್ರದಿಂದ ರಕ್ಷಾಬಂಧನ ಹಬ್ಬವನ್ನು ಆಚರಿಸಿದರು.

## ಸಂಗೀತಾಗೆ ಪಿಎಚ್‌ಡಿ

ವಿ. ಸಂಗೀತಾ ಅವರು ವಂಶವಾಹಿನಿ ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ನಡೆಸಿ ಮಂಡಿಸಿದ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ. ಪದವಿಗಾಗಿ ಅಂಗೀಕರಿಸಿದೆ.

## ರಾಜ್ಯದ ಸ್ಮಾರ್ಟ್ ನಗರಗಳು

ಇತ್ತೀಚಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎನ್‌ಡಿಎ ಸರ್ಕಾರದ ಮಹತ್ವಕಾಂಕ್ಷಿ ಸ್ಮಾರ್ಟ್‌ಸಿಟಿ ಯೋಜನೆಗೆ ಆಯ್ಕೆಯಾದ 98ನಗರಗಳ ಪೈಕಿ ಕರ್ನಾಟಕ ರಾಜ್ಯದ ದಾವಣಗೆರೆ, ತುಮಕೂರು, ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ - ಧಾರವಾಡ, ಹಾಗೂ ಬೆಳಗಾವಿ ನಗರಗಳು ಸೇರಿವೆ. ಈ ಆರು ನಗರದ ಮಹಿಳೆಯರು ಎಲ್ಲಾ ರೀತಿಯ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಬೇರೆಯವರಿಗೆ ಮಾದರಿಯಾಗಲು ಒಳ್ಳೆಯ ಅವಕಾಶವಿದೆ. ನಗರದ ಜವಾಬ್ದಾರಿ ನಿಬಾಯಿಸಲು ಮಹಿಳೆಯರ ಜವಬ್ದಾರಿ ತುಂಬಾ ಅವಶ್ಯಕತೆ ಇದ್ದು ಸೂಕ್ತ ಮಾರ್ಗಗಳಲ್ಲಿ ಮುಂದುವರಿಯಲು ತಮಗೆಲ್ಲರಿಗೂ ಶುಭವಾಗಲಿ.

# 2015ರ ಬಿಬಿಎಂಪಿ ಚುನಾವಣೆ



ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಒಟ್ಟು 198 ಸ್ಥಾನಗಳಲ್ಲಿ 197 ಕ್ಕೆ ಕಳೆದ ವಾರ ನಡೆದ ಚುನಾವಣೆಯಲ್ಲಿ ಬಿಜೆಪಿ 100, ಕಾಂಗ್ರೆಸ್ 76, ಜ.ದಳ 14, ಇತರರು 8 ಸ್ಥಾನಗಳಲ್ಲಿ ಜಯ ಗಳಿಸಿದ್ದಾರೆ. ಹೊಂಗಸಂದ್ರ ವಾರ್ಡನಲ್ಲಿ ಬಿಜೆಪಿ ಅಭ್ಯರ್ಥಿ ಭಾರತಿ ರಾಮಚಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದರು.

ಒಟ್ಟು 198 ಸ್ಥಾನಗಳಲ್ಲಿ ಮಹಿಳೆಯರ ಫಲಿತಾಂಶ ಬಿಜೆಪಿ 59 ಕಾಂಗ್ರೆಸ್ 26 ಜ.ದಳ 8 ಹಾಗೂ ಸ್ವತಂತ್ರ ಅಭ್ಯರ್ಥಿ 2 ಒಟ್ಟು 95 ಸದಸ್ಯರ ಬಲವನ್ನು ಹೊಂದಿದೆ. ಇದರಿಂದ ಬಿಬಿಎಂಪಿ ಎಂದರೆ ಬೆಂಗಳೂರನ್ನು ಬಿಂಬಿಸುವ ಮಹಿಳೆಯರ ಪಾಲಿಕೆ ಎಂದು ಭಾವಿಸಬಹುದು.

ಪ್ರಜ್ಞಾವಂತರು ಶೇ. 51 ರಷ್ಟು ಮತದಾರರು ಮತವನ್ನು ಚಲಾಯಿಸದೇ ಇದ್ದುದು ಬೇಸರದ ಸಂಗತಿ. ಮತ ಚಲಾಯಿಸಿದ ಶೇ. 49 ರಾಜಧಾನಿಯಲ್ಲಿ ಅಂದರೆ ಇದರಲ್ಲಿ ಶೇ. 100 ಮತದಾರರಿಗೆ ಎಲ್ಲಾ ಸೌಲಭ್ಯಗಳು ಬೇಕು ಆದರೆ ಮತದಾನದಲ್ಲಿ ಪಾಲ್ಗೊಳ್ಳದಿರುವುದು ಅತ್ಯಂತ ದುರದೃಷ್ಟಕರ. ಇದರಿಂದ ನಿಮಗಿದ್ದ ಸ್ವತಂತ್ರವನ್ನು ನೀವೇ ಕಳೆದುಕೊಂಡಿರಿ.

ಒಟ್ಟಿನಲ್ಲಿ ಮತಚಲಾಯಿಸಿದ ಎಲ್ಲಾ ವಾರ್ಡ್‌ಗಳಲ್ಲಿ ಹೆಚ್ಚಿನ ಸದಸ್ಯರುಗಳು ಮಹಿಳೆಯರು ಜಯಗಳಿಸಿದ್ದು ಬಿಬಿಎಂಪಿಗೆ ಒಂದು ವರವಾಗಿದೆ. ಆಯ್ಕೆಯಾದ ಎಲ್ಲಾ 95 ಮಹಿಳಾ ಕಾರ್ಪೋರೇಟರ್‌ಗಳಿಗೆ ಶುಭಾಶಯಗಳು. ಈಗ ನಿಮ್ಮ ಜವಾಬ್ದಾರಿ ಎಂದರೆ ರಾಜಧಾನಿ ನಗರವನ್ನು ಸ್ವಚ್ಛವಾಗಿ ಇಡುವುದು, ಕುಡಿಯುವ ನೀರು ಸರಬರಾಜು, ಒಳ್ಳೆಯ ಗಾಳಿ, ಒಳ್ಳೆಯ ಆಹಾರಗಳನ್ನು ನೀಡಬೇಕಾಗಿರುವುದು ನಿಮ್ಮ ಕರ್ತವ್ಯವಾಗಿದೆ. ಇದನ್ನು ನೀಡಲು ನಿಮ್ಮಿಂದ ಸಾಧ್ಯ ಮಹಿಳೆಗೆ ಅಸಾಧ್ಯವೆಂಬುದಿಲ್ಲ ಮನಸ್ಸು ಮಾಡಿದರೆ ಎಲ್ಲಾ ಸಾಧ್ಯ ಇದು ಸತ್ಯವೂ ಕೂಡ.

ಪಕ್ಷಬೇಧವನ್ನು ಬದಿಗಿಟ್ಟು ಆಯ್ಕೆಗೊಂಡ ಎಲ್ಲಾ ಮಾತೆಯರು ಸ್ವತಂತ್ರವಾಗಿ ನಿಮ್ಮ ವಾರ್ಡಿನ ಜನಗಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿ. ಈಗ ನಿಮಗೆ ಸಿಕ್ಕಿರುವ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಂಡಲ್ಲಿ ನಿಮ್ಮ ಸ್ಥಾನ ಸುಭದ್ರ. ಸುಭದ್ರ ಸ್ಥಾನ ಬೇಕೋ? ಬೇಡವೋ? ಇದರ ಆಯ್ಕೆ ನಿಮಗೆ ಸೇರಿದ್ದು. ಒಟ್ಟಿನಲ್ಲಿ ಮಹಿಳಾಮಣಿಗಳಲ್ಲಿ ವಿನಂತಿ ಎಂದರೆ ಸಿಕ್ಕಿರುವ ಅವಕಾಶವನ್ನು ನಿಮ್ಮ ಕಡೆಯೇ ಇರುವಂತೆ ಕಾಪಾಡಿಕೊಳ್ಳಿ. ಬೆಂಗಳೂರು ನಗರವನ್ನು ಎಲ್ಲಾ ಕ್ಷೇತ್ರಗಳಲ್ಲೂ ಮಂಚೂಣಿಯಲ್ಲಿರುವಂತೆ ಕೆಲಸ ನಿರ್ವಹಿಸಿ ಎಂದು ವಿನಂತಿಸುತ್ತಾ ನಿಮಗೆಲ್ಲರಿಗೂ ಒಳ್ಳೆಯದಾಗಲಿ ಎಂದು ನಮ್ಮ ಪತ್ರಿಕಾ ಬಳಗದಿಂದ ಶುಭಾಶಯಗಳು.

## ಎಂದಿನಂತೆ ಅರಮನೆಯಲ್ಲಿ ನವರಾತ್ರಿ ಉತ್ಸವ



ರಾಜ್ಯದಲ್ಲಿನ ಬರ ಪರಿಸ್ಥಿತಿ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ಸರಳ ದಸರಾ ಆಚರಣೆಗೆ ಮುಂದಾಗಿರುವುದಕ್ಕೆ ತಮ್ಮ ಆಕ್ಷೇಪ ಇಲ್ಲವೆಂದು ಹಾಗೂ ಪ್ರತಿ ವರ್ಷದಂತೆ ಸಾಂಪ್ರದಾಯಿಕವಾಗಿ ನವರಾತ್ರಿ ಉತ್ಸವವನ್ನು ಅರಮನೆಯಲ್ಲಿ ಆಚರಿಸಲಾಗುವುದು ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಇತ್ತೀಚಿಗೆ ಮಡಿಕೇರಿಯಲ್ಲಿ ತಿಳಿಸಿದರು. ಅಲ್ಲದೆ ವಂಶ ಪಾರಂಪರ್ಯವಾಗಿ ನಡೆದು ಬಂದಿರುವ ಎಲ್ಲಾ ಸಾಂಪ್ರದಾಯಗಳು, ಆಚರಣೆಗಳು ಯಥಾಪ್ರಕಾರ ನಡೆಯಲಿದೆ ಎಂದು ಸ್ಪಷ್ಟಪಡಿಸಿರುತ್ತಾರೆ.

## ಸವಿತಾ ಜಯಭೇರಿ

ಈಕೆ ಪೊಲೀಸ್ ಇಲಾಖೆಯಲ್ಲಿ ಕಳೆದ 12 ವರ್ಷಗಳಿಂದ ಕಳಂಕ ರಹಿತ ಪೊಲೀಸ್ ಪೇದೆಯಾಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ವೃತ್ತಿಗೆ ಗುಡ್‌ಬೈ ಹೇಳಿ ಕಳೆದ ವಾರ ನಡೆದ ಬಿಬಿಎಂಪಿ ಚುನಾವಣೆಯಲ್ಲಿ ಶ್ರೀನಗರ ವಾರ್ಡ್‌ನಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಚುನಾವಣೆಯಲ್ಲಿ ಗೆಲುವನ್ನು ಸಾಧಿಸಿದ್ದಾರೆ. ಇವರ ರಾಜಕೀಯ ಪ್ರವೇಶ ಜನಸೇವೆಗೆ ಅಂಟಿಕೊಂಡಿದ್ದು ತಮ್ಮ ಕಾರ್ಯದಲ್ಲಿ ಧೈರ್ಯದಿಂದ ಮತದಾರರ ಜೊತೆ ಜೊತೆಯಲ್ಲೇ ಇದ್ದು ಅವರುಗಳ ಅಭಿವೃದ್ಧಿಗೆ ಶ್ರಮಿಸಲು ಇದೊಂದು ಸುವರ್ಣಾವಕಾಶ. ಈ ವಾರ್ಡ್‌ನ ಮಹಾರಾಣಿ ಮುಂದೆಯೂ ಇವರೇ ಎಂಬುದರಲ್ಲಿ ಎರಡು ಮಾತಿಲ್ಲ. ನಿಮ್ಮ ಧೈರ್ಯಕ್ಕೆ ಹಾಗೂ ವಿಜೇತರಾದುದಕ್ಕೆ ಶುಭಾಶಯಗಳು.

## ಹೊಸ ಗೆಟಪ್‌ನಲ್ಲಿ ಅನುಶ್ರೀ

ಅನುಶ್ರೀ ಕನ್ನಡ ವಾಹಿನಿಯಲ್ಲಿ ಚಿರಪರಿಚಿತಳು. ಅವಳ ಮಾತು ಚಿನಕುರುಳಿಯಂತೆ. ನಗು ಎಲ್ಲಿ ಜಾಸ್ತಿಯಾದರೆ ಮುತ್ತು ಉದುರುವುದೋ ಹಾಸ್ಯದಲ್ಲೂ ಸಹಾ ನಿಪುಣೆ. ಅಲ್ಲದೆ 'ಬೆಂಕಿ ಪಟ್ಟಣ'ಚಿತ್ರದ ನಾಯಕಿ.

ಈಗ 'ಮಾದ ಮತ್ತು ಮಾನಸಿ' ಚಿತ್ರದಲ್ಲಿ ಇವಳ ಹಾಡು ಹಾಗೂ ನರ್ತನ ಹೊಸ ಗೆಟಪ್. ಅನುಶ್ರೀ ಹಂತ ಹಂತವಾಗಿ ಅವಕಾಶಗಳನ್ನು ಸದುಪಯೋಗ ಪಡಿಸಿಕೊಂಡು ತನ್ನದೇ ಫ್ಯಾನ್ ಕಟ್ಟಿಕೊಂಡಿರುವ ಚಂದುಳ್ಳಿ ಚೆಲುವೆ ಅನುಶ್ರೀ.

## ವಿಚಾರ ಮಂಡನೆ

ಜಪಾನಿನ ಟೋಕಿಯೋದಲ್ಲಿ ನಡೆಯಲಿರುವ 9ನೇ ಐಎಸ್‌ಟಿಆರ್ ಏಷ್ಯಾ ಫೆಸಿಫಿಕ್ ಪ್ರಾದೇಶಿಕ ಸಮಾವೇಶಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಶಿಕ್ಷಣ ಶಾಸ್ತ್ರ ಅಧ್ಯಯನ ವಿಭಾಗದ ಡಾ. ನಿಂಗಮ್ಮ ಸಿ ಬೆಟ್ಸೂರ್ ರವರು ಅಭಿವೃದ್ಧಿ ಕಾರ್ಯಗಳಲ್ಲಿ ಸರ್ಕಾರ ಹಾಗೂ ಸರ್ಕಾರೇತರ ಸಂಸ್ಥೆಗಳ ಪಾಲುದಾರಿಕೆ ಎಂಬ ವಿಷಯದ ಬಗ್ಗೆ ವಿಚಾರ ಮಂಡಿಸಲಿದ್ದಾರೆ. ಆಪ್ತರು ಹಾಗೂ ಮೈಸೂರು ವಿ.ವಿ. ಆಡಳಿತ ವರ್ಗ ಶುಭವನ್ನು ಕೋರಿದೆ.

**ಬದುಕೇ ಹೀಗೆ !**

**ಕತ್ತಲಿದ್ದಾಗ ಬೆಳಕಿಗಾಗಿ ಹೋರಾಟ....**

**ಬೆಳಕಿದ್ದಾಗ ಕತ್ತಲಿಗಾಗಿ ಹುಡುಕಾಟ..??**

## ನಡೆ - ನುಡಿ

ನಿಮ್ಮ ಜೀವನದ ಮುನ್ನಡೆಯು ನಿಮ್ಮ ಪ್ರಯತ್ನಗಳು, ಯೋಗ್ಯತೆ ಮತ್ತು ಪಾತ್ರತೆಗಳ ಮೂಲಕ ಅಳೆಯಲ್ಪಡುತ್ತದೆ. ಜೀವನದ ಪ್ರತಿ ಕ್ಷಣವೂ ಅಮೂಲ್ಯ. ಪ್ರತಿದಿನ ಒಂದು ಹೊಸ ಹಾಗೂ ಉತ್ತಮ ವಿಚಾರವನ್ನು ಕಲಿಯಿರಿ.

## ಅಮ್ಮಾ ಯೋಜನೆ

ಅಮ್ಮಾ ಬ್ರಾಂಡ್‌ನಡಿಯಲ್ಲಿ ಮಾಸಿಕ ಹೆಲ್ತ್ ಚೆಕಪ್, ಮಹಿಳೆಯರಿಗಾಗಿ ವಿಶೇ, ಮಾಸಿಕ ಹೆಲ್ತ್ ಚೆಕಪ್, ಆರೋಗ್ಯ ಸ್ಕೀಮ್ ಹಾಗೂ ಪ್ರಗ್ನೆನ್ಸಿ ಸಂಜೀವಿನಿ ಯೋಜನೆಯನ್ನು ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರು ಕಳೆದವಾರ ಘೋಷಿಸಿದ್ದಾರೆ. ಇದರ ಪ್ರಯೋಜನವನ್ನು ಆ ರಾಜ್ಯದ ಮಹಿಳೆಯರು ಪ್ರಥಮ ಆರೋಗ್ಯ ಕೇಂದ್ರಗಳಲ್ಲಿ ಪಡೆಯಬಹುದು.

## ಪರೋಪಕಾರಿ

ಶಿಕ್ಷಕರಲ್ಲಿ ಪರೋಪಕಾರ ಗುಣವಿರಬೇಕು. ಆ ಗುಣ ಶಿಕ್ಷಕರನ್ನು ಗ್ರಾಮಕ್ಕೆ ತನ್ನ ಸುತ್ತಲಿರುವ ಪರಿಸರಕ್ಕೆ ಬಹಳ ಹತ್ತಿರದವರನ್ನಾಗಿ ಮಾಡುತ್ತದೆ. ಗ್ರಾಮದವರನ್ನು ಆಹ್ವಾನಿಸಿ, ಸ್ವಾಗತಿಸಿ ಸಾಧ್ಯವಾದರೆ ಸಹಾಯವನ್ನು ಮಾಡಿ. ಇದರಿಂದ ಗ್ರಾಮದಲ್ಲಿ ಶಿಕ್ಷಣದ ಬಗ್ಗೆ ಆತ್ಮೀಯ ಭಾವನೆ ಹಾಗೂ ಮಕ್ಕಳಲ್ಲಿ ಆದರ್ಶವಾಗಿ ಅವರಿಗೂ ಸಹಾ ಆ ಗುಣ ಅಭ್ಯಾಸವಾಗುವುದು.

## ನೀವೇನಂತೀರಿ?

ಆಸೆ ಮತ್ತು ಆನಂದ - ಆಸೆಗಳೆಲ್ಲವೂ ಸಂತೋಷವನ್ನು ಪಡೆಯುವುದಕ್ಕಾಗಿಯೇ ಪ್ರತಿಯೊಂದು ಆಸೆಯ ಗುರಿಯೂ ಅದೇ ಅಲ್ಲವೇ ? ಆದರೂ ಎಷ್ಟು ಸಾರಿ ನಿಮ್ಮ ಆಸೆಗಳು ನಿಮ್ಮ ಗುರಿ ಮುಟ್ಟಿವೆ ? ಆಸೆಯ ಸಹಜ ಸ್ವಭಾವವೇನು ಎಂದು ಯೋಚಿಸಿದಾಗ ಅದರರ್ಥ ಸಂತೋಷವು- ನಾಳೆಗೆ (ಭವಿಷ್ಯದಲ್ಲಿ) ಈಗಲ್ಲ (ವರ್ತಮಾನದಲ್ಲಿಲ್ಲ) ಎಂದತ್ತವೆ? ಸಂತೋಷವೂ )ನಾಳೆಯಲ್ಲಿಲ್ಲ. ಅದು ಯಾವಾಗಲೂ ಈಗ ಕ್ಷಣದಲ್ಲಿದೆ. ನೀನು ಆನಂದದಿಂದ ತುಂಬಿದ್ದಾಗ ಆಸೆಗಳನ್ನು ಹೊಂದಿರಲು ಹೇಗೆ ಸಾಧ್ಯ ? ಹಾಗೆಯೇ ನಿಮ್ಮಲ್ಲಿ ಆಸೆಗಳು ತುಂಬಿದ್ದಾಗ ಆ ಕ್ಷಣದಲ್ಲಿ ಸಂತೋಷವಾಗಿರಬಲ್ಲಿರಿ. ಆಸೆಯು ನಿಮ್ಮನ್ನು ಆನಂದದೆಡೆಗೆ ಕರೆದುಕೊಂಡು ಹೋಗುತ್ತಿರುವಂತೆ ತೋರುತ್ತದೆ ಅಷ್ಟೇ! ವಾಸ್ತವವಾಗಿ ಅದಕ್ಕೆ ಸಾಧ್ಯವಿಲ್ಲ. ಆದ್ದರಿಂದಲೇ ಅದು ಮಾಯೆ ಎನಿಸುತ್ತದೆ. ಇದಕ್ಕೆ ನೀವೇನಂತೀರಿ?

## ಜನರೇಷನ್ ಗ್ಯಾಪ್

ಹೆತ್ತವರು ಮತ್ತು ಮಕ್ಕಳ ನಡುವೆ ಅಂತರ ಸರ್ವೇಸಾಮಾನ್ಯ ಹಾಗೂ ಸ್ವಾಭಾವಿಕ. ಈ ಅಂತರ ತಲೆ ತಲೆ ಮಾರುಗಳಿಂದಲೂ ನಡೆಯುತ್ತಲೇ ಬರುತ್ತಿದೆ. ಬದಲಾಗುತ್ತಿರುವ ಸಾಮಾಜಿಕ ಸ್ಥಿತಿಗತಿ, ವೈಜ್ಞಾನಿಕ ಪ್ರಗತಿ, ಶೈಕ್ಷಣಿಕಕವಾದ ಇತ್ಯಾದಿಗಳ ಫಲವಾಗಿ ಒಂದು ತಲೆಮಾರಿನವರು ಇನ್ನೊಂದು ತಲೆಮಾರಿನವರ ಜೊತೆ ಹೊಂದಿಕೊಳ್ಳಲು ಕಷ್ಟವಾಗುತ್ತದೆ. ಇದರಿಂದ ತರತರವಾದ ಅಂತರಗಳ ಗೋಡೆ ನಿರ್ಮಾಣವಾಗಿ ಹೆತ್ತವರು- ಮಕ್ಕಳು ಒಬ್ಬರಿಂದ ಒಬ್ಬರು ದೂರವಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಈ ಅಂತರವನ್ನು ಸಂಪೂರ್ಣವಾಗಿ ನಿವಾರಿಸಲು ಸಾಧ್ಯವಾಗದೇ ಹೋದರೂ ಕಡಿಮೆಗೊಳಿಸುವ ಪ್ರಯತ್ನವನ್ನು ಇಬ್ಬರೂ ಮಾಡಬೇಕಾಗುತ್ತದೆ.

## ಸ್ಮಾರ್ಟ್ ನಗರಗಳು

ಎನ್‌ಡಿಎ ಸರ್ಕಾರದ ಮಹತ್ವಾಕಾಂಕ್ಷಿ ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾದ 98 ನಗರಗಳ ಪೈಕಿ ಕರ್ನಾಟಕ ರಾಜ್ಯದ ದಾವಣಗೆರೆ, ತುಮಕೂರು, ಮಂಗಳೂರು, ಶಿವಮೊಗ್ಗ, ಹುಬ್ಬಳ್ಳಿ - ಧಾರವಾಡ ಹಾಗೂ ಬೆಳಗಾವಿ ನಗರಗಳು ಸೇರಿರುವುದು ಸಂತೋಷ ಆದರೂ ರಾಜ್ಯದಲ್ಲಿ ಇನ್ನೂ ಅನೇಕ ನಗರಗಳು ಈ ಯೋಜನೆಗೆ ಅರ್ಹವಾಗಿದೆ. ರಾಜ್ಯದ ನಗರದ ಮಹಿಳೆಯರು ಎಲ್ಲ ರೀತಿಯ ಸೌಲಭ್ಯ ಹಾಗೂ ಸೌಕರ್ಯ ಕಾಪಾಡಿಕೊಂಡು ಕ್ಷೇತ್ರದ ಸೇವೆಯನ್ನು ಮಾಡಿ ಇತರೆ ನಗರಗಳಿಗೆ ಮಾದರಿಯಾಗಲಿ ಎಂಬುದೇ ನಮ್ಮಗಳ ಆಶಯವಾಗಿರುತ್ತದೆ.

## ಮಹಿಳಾ ಕಾರ್ಯಾಗಾರ

ಬೆಂಗಳೂರಿನ ದ ಹಂಗರ್ ಪ್ರಾಜೆಕ್ಟ್ ಸಹ ಯೋಗದಲ್ಲಿ ಒಡಿಪಿ ಸಂಸ್ಥೆಯು ಅಂತೋಣಿ ಸಮುದಾಯ ಭವನ ಡೋರ್ನಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಮಹಿಳಾ ಸದಸ್ಯರುಗಳಿಗೆ ಮಹಿಳಾ ನಾಯಕತ್ವ ಕಾರ್ಯಗಾರ ಇತ್ತೀಚೆಗೆ ನಡೆಯಿತು. ಕಲಿಕಾ ಸಾಮಗ್ರಿ, ಭಿತ್ತಿ ಚಿತ್ರ ಪ್ರದರ್ಶನದ ಮೂಲಕ ಆರಂಭಗೊಂಡ ಕಾರ್ಯಗಾರ ಮೂರು ದಿವಸ ನಡೆಯಿತು. ಡೋರ್ನಹಳ್ಳಿ, ಹೊಸ ಅಗ್ರಹಾರ, ಮಾಯಿಗೋಡನಹಳ್ಳಿ, ಲಾಳದೇವನಹಳ್ಳಿಯ ಮಹಿಳಾ ಸದಸ್ಯರುಗಳು ಕಾರ್ಯಗಾರದಲ್ಲಿ ಭಾಗವಹಿಸಿ ಅದರ ಪ್ರಯೋಜನವನ್ನು ಪಡೆದುಕೊಂಡರು.

## ನಿಮಗೆ ತಿಳಿದಿರಲಿ

**ಸಾಮಾನ್ಯ ಲಿಖಿತ ಪರೀಕ್ಷೆ CWE ಗೆ ಒಳಪಡುವ 19 ಬ್ಯಾಂಕುಗಳು**

| | |
|---|---|
| ಸಿಂಡಿಕೇಟ್ ಬ್ಯಾಂಕ್ | ಬ್ಯಾಂಕ್ ಆಫ್ ಮಹಾರಾಷ್ಟ್ರ |
| ವಿಜಯಾ ಬ್ಯಾಂಕ್ | ಅಲಹಾಬಾದ್ ಬ್ಯಾಂಕ್ |
| ಕಾರ್ಪೋರೇಷನ್ ಬ್ಯಾಂಕ್ | ಆಂಧ್ರ ಬ್ಯಾಂಕ್ |
| ಇಂಡಿಯನ್ ಬ್ಯಾಂಕ್ | ದೇನಾ ಬ್ಯಾಂಕ್ |
| ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | ಯೂಕೋ ಬ್ಯಾಂಕ್ |
| ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾ | ಪಂಜಾಬ್ ಅಂಡ್ ಸಿಂಧ್ ಬ್ಯಾಂಕ್ |
| ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ |
| ಬ್ಯಾಂಕ್ ಆಫ್ ಇಂಡಿಯಾ | ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ |
| ಬ್ಯಾಂಕ್ ಆಫ್ ಬರೋಡಾ | ಪಂಜಾಬ್ ನ್ಯಾಷನಲ್ ಬ್ಯಾಂಕ್ |

**ಹೀಗೀದ್ದರೆ ಎಷ್ಟು ಚೆಂದ !!!**

**ನಿಮಗಿಲ್ಲವೆ ಆಸೆ !!!**





# ನೇಮಕಾತಿ ಅಂಕಣ

### ಸ್ಟಾಫ್ ಸಲೆಕ್ಷನ್ ಕಮಿಷನ್

1064 ಸ್ಟನೋಗ್ರಾಫರ್ (ಗ್ರೇಟ್ ಸಿ. ಮತ್ತು ಡಿ) ಹುದ್ದೆಗೆ ಕೇಂದ್ರ ಸರ್ಕಾರದ ವಿವಿಧ ಇಲಾಖೆಯ ಕಛೇರಿಗಳಲ್ಲಿ ಖಾಲಿ ಇರುವ ಸ್ಟೆನೋಗ್ರಾಫರ್ ಹುದ್ದೆಗಳ ನೇಮಕಾತಿಗಾಗಿ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ಸ್ಟಾಫ್ ಸಲೆಕ್ಷನ್ ಕಮಿಟಿ ನಿರ್ಧರಿಸಿದ್ದು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು ಅರ್ಜಿ ಸಲ್ಲಿಸಲು 07.09.2015 ಕೊನೆಯ ದಿವಸವಾಗಿದೆ. ಮಹಿಳಾ ಅಭ್ಯರ್ಥಿಗಳು ಈ ಅವಕಾಶವನ್ನು ಉಪಯೋಗಿಸಿಕೊಳ್ಳುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ www.ssconlina.nic.in ವೆಬ್‌ಸೈಟ್ ನೋಡಿ

### ಇಂಡೋ- ಟಿಬೆಟ್‌ನ ಬಾರ್ಡರ್ ಪೋಲೀಸ್

158ಹೆಡ್ ಕಾನ್ಸ್‌ಟೇಬಲಂ ಅಸಿಸ್ಟೆಂಟ್ S.I ಹುದ್ದೆಗಳಿಗಾಗಿ ಇಂಡೋ- ಟಿಬೆಟ್‌ನ ಬಾರ್ಡರ್ ಪೋಲೀಸ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಅರ್ಹ ಮಹಿಳೆಯರಿಗೂ ಅವಕಾಶವಿದ್ದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 10.09.2015ಹೆಚ್ಚಿನ ಮಾಹಿತಿಗಾಗಿ www.itbpolice.nic.in ನೋಡಿ.

### ಗ್ರಾಮ ಲೆಕ್ಕಿಗರ ಹುದ್ದೆ

ಕರ್ನಾಟಕ ಸರ್ಕಾರ ಕಂದಾಯ ಇಲಾಖೆಗೆ ದ.ಕ. ಜಿಲ್ಲೆಯ ತಾಲ್ಲೂಕುಗಳಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 23.09.2015 ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ http://dk.nic.in ಒಟ್ಟು 40 ಹುದ್ದೆಗಳಲ್ಲಿ 14 ಹುದ್ದೆಗಳು ಮಹಿಳೆಯರಿಗಾಗಿಯೇ ಇರುತ್ತದೆ.

## ಹೇಗಿರಬೇಕು?

ಮನೆಗೆ ಅತಿಥಿಗಳು ಬಂದು ಹೋದ ಬಳಿಕ ಅವರ ಕುರಿತು ಕೆಟ್ಟ ಮಾತು ಆಡಬಾರದು. ಇತರರ ಮನೆಗೆ ಅತಿಥಿಯಾಗಿ ಹೋಗಿ ಬಂದ ಮೇಲೆ ಅವರ ಬಗ್ಗೆ ಕೆಟ್ಟ ಮಾತಾಡಬಾರದು.

## ಸ್ವಲ್ಪ ನಗ್ತೀರಾ ಪ್ಲೀಸ್....?

ಮದುವೆ ಸಮಾರಂಭದಲ್ಲಿ ಹತ್ತಿರದ ಬಂಧುಗಳು ಹುಡುಗಿಯನ್ನು ಸಾಮಾನ್ಯವಾಗಿ ಕೇಳುತ್ತಾರೆ. ಏನಮ್ಮ ಹುಡುಗ ಚೆನ್ನಾಗಿದ್ದಾನಾ? ಇದಕ್ಕೆ ಹುಡುಗಿ ಹೀಗೆ ಹೇಳಿದರೆ ಹೇಗಿರುತ್ತೇ? ಸ್ವಲ್ಪಾನೂ ಚೆನ್ನಾಗಿಲ್ಲ. ಸುಮ್ನೆ ತಮಾಷೆಗೆ ಮದುವೆ ಆಗ್ತಾ ಇದೀನಿ.

# 2015ರ ಬಿಬಿಎಂಪಿ, ಬೃಹತ್ ಬೆಂಗಳೂರು ನಗರ ಚುನಾವಣೆಯಲ್ಲಿ ಜಯಗಳಿಸಿರುವ ಮಹಿಳಾ ಅಭ್ಯರ್ಥಿಗಳು

| No. | Ward Name | Winning candidate | Party |
|---|---|---|---|
| 01 | Kempeowda | Chandramma | BJP |
| 02 | Atturu | Netrapallavi | BJP |
| 03 | Vidyaranyapura | Kusuma H | BJP |
| 04 | Doddabommasandra | Jayalakshmi Pillappa | BJP |
| 05 | T. Dasarhalli | Umadevi Nagaraj | BJP |
| 06 | JP Park | Mamatha K.B. | BJP |
| 07 | Sanjaynagara | Indira Subash | BJP |
| 08 | Ganganagara | Pramila Anandh | BJP |
| 09 | Rammurthynagar | Padmavathi Srinivas | BJP |
| 10 | Kammanahalli | Munilakshmamma | BJP |
| 11. | Aramanenagar | Sumangala B | BJP |
| 12. | Chokkasandra | Sarvamangala Nagaraj | BJP |
| 13. | K R Puram | Poornima K | BJP |
| 14. | CV Ramannagara | Aruna Ravi | BJP |
| 15. | Hegganahalli | Bhagyamma K | BJP |
| 16. | Sarvajnanagara | Sheshirekha Mukundh | BJP |
| 17. | Doddanekkundhi | Swetha Vijayakumar | BJP |
| 18. | Jeevanbeemanagar | Veenakumari | BJP |
| 19. | Dayanandhanagar | Kumari Palanikanth | BJP |
| 20. | Basaveshwaranagar | Umavathi Padmaraj | BJP |
| 21. | Kamakshipalya | Prathima KS Ramesh | BJP |
| 22. | Agraharadasarahalli | Shilpa G Sridhar | BJP |
| 23. | Sri ramandhira | Deepa Nagesh | BJP |
| 24. | Chikkapet | Leela Shivakumar | BJP |
| 25. | Agaram | Bhavya | BJP |
| 26. | DRswamy Temple | Prathibha Dhanaraj | BJP |
| 27. | Vijayanagar | Srilatha Gopinathraj | BJP |
| 28. | Hosahalli | Mahalakshmi R | BJP |
| 29. | Marenahalli | Madhukumari Nagesh | BJP |
| 30. | Maruthimandira | Shanthakumari V | BJP |
| 31. | Jnanabharathi | Tejaswini seetharamaiah | BJP |
| 32. | Ullalu | Sharadha Muniraju | BJP |
| 33. | Rayapuram | Sheshikala Keshav | BJP |
| 34. | Vishveshawarapuram | Vani Rao | BJP |
| 35. | Varthur | Pushpa Manjunath | BJP |
| 36. | Bellandhur | Asha Suresh N | BJP |
| 37. | Srinagara | Savitha M | BJP |
| 38. | Deepanjalinagara | Anupama Dharmapal | BJP |
| 39. | Rajarajeshwarinagar | Nalini Manjunath | BJP |
| 40. | Hosakerehalli | Rajeshwari Cholaraj | BJP |
| 41 | Girinagara | Nandini Vijayvittal | BJP |
| 42. | Vidyapeeta | Shamala Saikumar | BJP |
| 43. | Ganeshmandhir | Lakshmi D.H. | BJP |
| 44. | Karisandra | Yashodha Lakshmikanth | BJP |
| 45. | Yadiyur | Poornima Ramesh | BJP |
| 46. | Jakkasandra | Saraswathamma | BJP |
| 47. | JP Nagara | KN Lakshmi Nataraj | BJP |
| 48. | Sarakki | Deepa Manjunathareddy | BJP |
| 49. | Shakambarinagara | Malathi M | BJP |
| 50. | Padmanabhanagar | L Shobha Anjanappa | BJP |
| 51. | Chikkalasandra | Supriya shekar | BJP |
| 52. | Jaraganahalli | Shobha BM | BJP |
| 53. | Puttenahalli | Prabhavathi Ramesh | BJP |
| 54. | Honasandra | Bharathi Ramachandra | BJP |
| 55. | Manganammapalya | Shobha Jagadeesh | BJP |
| 56. | Singasandra | Shantha V | BJP |
| 57. | Arakere | Bhagyalakshmi | BJP |
| 58. | Gottigere | Lalitha T Narayan | BJP |
| 59. | Konanakunte | Sheshikala Jayaram | BJP |
| 60. | Chowdeshwari | R Padmavathi | Congress |
| 61. | Thanisandra | Mamatha KM | Congress |
| 62. | Kuvempunagar | V Prathibha Rajan | Conress |
| 63. | Nagavara | Irshad begum | Congress |
| 64. | Horamavu | Radhamma | Congress |
| 65. | HMT | Asha suresh | Congress |
| 66. | Peenya Ind.area | Lalithathimmananjaiah | Congress |
| 67. | Lingarajapura | Lavanya Ganesh | Congress |
| 68. | Benniganahalli | Meenakshi | Congress |
| 69. | Ramaswamypalya | Netravathi Krishnegowda | Congress |
| 70. | Shivajinagara | Fareedha | Congress |
| 71. | Gandhinagara | Lalitha RJ | Congress |
| 72. | Prakashnagar | Padmavathi G | Congress |
| 73. | Dr. Rajkumar | Roopa R | Congress |
| 74. | Shivanagar | Manjula Vijayakumar | Congress |
| 75. | Shanthinagara | Sowmya P | Congress |
| 76. | Binnipete | MahadevammaNagaraj | Congress |
| 77. | Nayandalli | Savitha M | Congress |
| 78. | Bapujinagara | Ajmal Beig | Congress |
| 79. | Jagajeevanramnagar | Seema Altafkhan | Congress |
| 80. | Chamarajpet | B Kokila Chandrashekar | Congress |
| 81. | Ajadnagar | Sujatha M | Congress |
| 82. | Audugodi | Manjula | Congress |
| 83. | Jayanagara | Gangambik Mallikarjun | Congress |
| 84. | Galianjineyaswamy | Uma N | Congress |
| 85. | Vasanthapura | Shobhagowda | Congress |
| 86. | Kushalnagar | Ummesalma | JDS |
| 87. | Kavalbysandra | Netra Narayan | JDS |
| 88. | Laggere | Manjula Narayanaswamy | JDS |
| 89. | Rajagopalnagar | Padmavathi Narsimmurthy | JDS |
| 90. | Shaktiganapatinagar | Gangamma Rajanna | JDS |
| 91. | Vrushabharathi | SP Hemalatha | JDS |
| 92. | Kaveripura | R Rameela | JDS |
| 93. | KR Market | Najeemakanum | JDS |
| 94. | Alasur | Mamathasaravana | Independent |
| 95. | Kempapuraagrahara | Gayathri | Independent |

ಬೆಂಗಳೂರು ನಗರದ ಮತದಾರರು ಮೇಲ್ಕಂಡ ಮಹಿಳಾ ಅಭ್ಯರ್ಥಿಗಳಿಗೆ ಅವಕಾಶವನ್ನು ನೀಡಿರುತ್ತಾರೆ. ತಾವುಗಳು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡಲ್ಲಿ ಇನ್ನು ಮುಂದೆಯೂ ನಿಮ್ಮ ನಿಮ್ಮ ವಾರ್ಡ್‌ಗಳಲ್ಲಿ ನಿಮ್ಮ ಸ್ಥಾನ ಸುಭದ್ರ ಎಂಬುದನ್ನು ಅರಿತು ಎಲ್ಲ ರೀತಿಯ ಜನರ ಸ್ಪಂಧನಕ್ಕೆ ಸ್ಪಂಧಿಸಿ ಉತ್ತಮ ಕಾರ್ಯವನ್ನು ಮಾಡಿ. ಮತದಾರನನ್ನು ನೋಯಿಸದೇ, ಸ್ವತಂತ್ರವಾಗಿ ನಿಮ್ಮ ಕೈಲಾಗುವ ಎಲ್ಲ ಕೆಲಸ ಕಾರ್ಯಗಳನ್ನು ಸೌಲಭ್ಯಗಳೊಂದಿಗೆ ಮಾಡಿಕೊಟ್ಟು ಅವರುಗಳಿಂದ ಮೆಚ್ಚುಗೆಯನ್ನು ಪಡೆಯಿರಿ ಎಂದು ನಮ್ಮ ಪತ್ರಿಕಾ ಬಳಗದಿಂದ ತಮಗೆಲ್ಲರಿಗೂ ಶುಭವನ್ನು ಕೋರಿ ಹಾರೈಸಿದೆ.

## ಅನಘಾಗೆ ಸ್ವರ್ಣ ಪದಕ

ಚೆನ್ನೈನಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ 29 ನೇ ರಾಷ್ಟ್ರೀಯ ಚೆಸ್ ಚಾಂಪಿಯನ್ ಷಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದು ಅನಘಾ ಸ್ವರ್ಣಪದಕವನ್ನು ಗಳಿಸಿದ್ದಾಳೆ. ಈ ಟೂರ್ನಿ 7 ವರ್ಷದೊಳಗಿನವರಿಗಾಗಿದ್ದು ನಂಜನಗೂಡು ತಾಲ್ಲೂಕು ಕಳಲೆ ಗ್ರಾಮದಲ್ಲಿನ ಆಚಾರ್ಯ ಗುರುಕುಲ ವಿದ್ಯಾಪೀಠದಲ್ಲಿ 2ನೇ ತರಗತಿ ವ್ಯಾಸಂಗ ಮಾಡುತ್ತಿದ್ದು ಚೆಸ್ ಆಟದಲ್ಲಿ ಕಳೆದ ಎರಡು ವರ್ಷಗಳಿಂದಲೂ ಟೂರ್ನಿಗಳಲ್ಲಿ ಭಾಗವಹಿಸಿ ಹಲವಾರು ಬಹುಮಾನವನ್ನು ಪಡೆದಿದ್ದಾಳೆ. ಈ ಟೂರ್ನಿಯಲ್ಲಿ ಅನಘಳ ಆಟ ಅಮೋಘ ವಾದ್ದರಿಂದಲೇ ರಾಷ್ಟ್ರೀಯ ಚೆಸ್ ಚಾಂಪಿಯನ್ ಆಗಿ ಕರ್ನಾಟಕಕ್ಕೆ ಹೆಮ್ಮೆಯನ್ನು ತಂದಿದ್ದಾಳೆ. ಗ್ರಾಮಸ್ಥರು, ಶಿಕ್ಷಕ ವೃಂದ ಮತ್ತು ಅವಳ ಗೆಳತಿಯರು ಶುಭವನ್ನು ಕೋರಿದ್ದಾರೆ.

## ಕಂಚಿನ ಪದಕದ ಬದಲು ಕಣ್ಣೀರು!

ಕಳೆದ ವಾರ ನಡೆದ ಬೀಜಿಂಗ್‌ನಲ್ಲಿನ ವರ್ಲ್ಡ್ ಅಥ್ಲೀಟ್ ಚಾಂಪಿಯನ್ ಶಿಪ್‌ನಲ್ಲಿ 10,000 ಮೀಟರ್ ಓಟದ ಸ್ಪರ್ಧೆಯಲ್ಲಿ ಅಮೆರಿಕದ ಓಟಗಾರ್ತಿ ಮೊಲ್ಲಿ ಹಡಲ್ 9999 ಮೀಟರ್ ತನಕ ಸರಿಯಾಗಿಯೇ ಓಡಿದಳು. ಆದರೆ ತಾನು ಕಂಚಿನ ಪದಕ ಗೆದ್ದೆ ಎಂದು ಎರಡೂ ಕೈಯೆತ್ತಿ ಸಂಭ್ರಮಿಸತೊಡಗಿದಳು. ಅಷ್ಟರಲ್ಲಿ ಅಮೆರಿಕದ ಮತ್ತೊಬ್ಬ ಆಟಗಾರ್ತಿ ಎಮಿಲಿ ಜಿಗಾರು ಕಂಚಿನ ಪದಕ ಪಡೆದಳು. ಗೆದ್ದೆ ಎಂಬ ಗೆಸ್‌ನಿಂದ ಕಂಚಿನ ಪದಕ ಕಳೆದುಕೊಂಡು ಟ್ರಾಕಿನಲ್ಲೇ ಅತ್ತಳು. ಆದರೆ ಸಮಾಧಾನ ಮಾಡಿದ್ದು ಕಂಚಿನ ಪದಕ ಗೆದ್ದ ಎಮಿಲಿ.

## ಭಾರತದ ಮಹಿಳಾ ಹಾಕಿ ತಂಡಕ್ಕೆ ಸೌಭಾಗ್ಯ

ಇತ್ತೀಚೆಗೆ ನಡೆದ ಯೂರೋ ಹಾಕಿ ಚಾಂಪಿಯನ್‌ಷಿಪ್ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಸ್ಪೈನ್ ಸೋಲನ್ನು ಅನುಭವಿಸಿದ್ದರಿಂದ ಮುಂಬರುವ 2016 ರ ರಿಯೋ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ಭಾರತದ ಮಹಿಳಾ ಹಾಕಿ ತಂಡಕ್ಕೆ ಸೌಭಾಗ್ಯ ಬಂದಿದ್ದು ಹಾಗೂ ಅರ್ಹತೆಯನ್ನು ಪಡೆದುಕೊಂಡಿದೆ ಅರ್ಹತೆಗೆ ತಕ್ಕಂತೆ ಈಗಿನಿಂದಲೇ ಶ್ರಮವಹಿಸಿ ತರಬೇತಿಯನ್ನು ಪಡೆದು ಟೂರ್ನಿಯಲ್ಲಿ ಆಟವಾಡಿ ದೇಶಕ್ಕೆ ಪದಕವನ್ನು ತನ್ನಿ ಎಂಬುದು ಕ್ರೀಡಾಭಿಮಾನಿಗಳ ಆಶಯವಾಗಿದೆ.


# ಮಹಿಳಾ ವಿಶೇಷ

**ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ**
**(ಪ್ರತಿ ಮಂಗಳವಾರ)**

**ಮೈಸೂರು ಕಛೇರಿ :**
ಸಂಖ್ಯೆ 1021, 14 ನೇ ಕ್ರಾಸ್ 2 ನೇ ಹಂತ,
ಹೆಬ್ಬಾಳು, ಮೈಸೂರು - 570 017

**ಬೆಂಗಳೂರು ಕಛೇರಿ :**
ಸಂಖ್ಯೆ 734, ನ್ಯೂ ಮಸೀದಿ ರಸ್ತೆ, ಮೆಟ್ರೋ ಸ್ಟೇಷನ್ ಹತ್ತಿರ,
ಮೈಸೂರು ಕರೆಸ್ಪಾಂಡೆನ್ಸ್ ಕಾಲೇಜಿನ ಮೇಲೆ, ಟಿ. ದಾಸರಹಳ್ಳಿ,
ಬೆಂಗಳೂರು - 560 057

**ಹೆಚ್.ವಿ. ವೆಂಕಟಸುಬ್ಬರಾವ್** — ಸಂಪಾದಕರು — **8880334444**
**ಫಾದರ್ ವಿಲ್ಸನ್ ಗೋಪಾಲಿ** — ಉಪ ಸಂಪಾದಕರು — **7795661563**



*ಪತ್ರಿಕೆ ಬಿಡುಗಡೆ ಸಮಾರಂಭಕ್ಕೆ ಹಾರ್ದಿಕ ಶುಭಾಶಯಗಳು*

**Sri. K.R. Mohan Kumar,**
**Chairman,**
MUDA,
JLB Road, Mysuru 570024
Mob: 8105209999

*ಮಹಿಳಾ ವಿಶೇಷ ವಾರಪತ್ರಿಕೆಗೆ ಶುಭಾಶಯಗಳು*

**Sri M. Shivanna**
**Corporator**
Ward No. 26, Hebbal 2nd Stage,
Mysuru 570017
Mob: 94498 41026

***Best wishes :***

**M/S THE REPUBLIC SPORTS CO.,**
Jaganmohana Palace Road,
Mysuru 570024
Mob:9844280040

***Best wishes :***

**M/S MY TARPAULINS**
87, D.Devrajurs Road,
Mysuru 570001,
Mob: 9886817266

*ಪತ್ರಿಕೆ ಬಿಡುಗಡೆ ಸಮಾರಂಭಕ್ಕೆ ಹಾರ್ದಿಕ ಶುಭಾಶಯಗಳು*

**ಜನ ಮನ ರಂಗ (ರಿ.)**
ಸಂಖ್ಯೆ 531, ವಿನಯ ಮಾರ್ಗ, 9 ನೇ ಕ್ರಾಸ್
ಸಿದ್ಧಾರ್ಥನಗರ, ಮೈಸೂರು - 570 011
ಅಧ್ಯಕ್ಷರು: **ಸಿ.ಪಿ. ತಮ್ಮಣ್ಣ** Mob. 9620752999

*ಮಹಿಳಾ ವಿಶೇಷ ವಾರಪತ್ರಿಕೆಗೆ ಶುಭಾಶಯಗಳು*

**ವಿಘ್ನೇಶ್ ಸೆಕ್ಯೂರಿಟಿ ಸರ್ವಿಸಸ್**
ಸಂಖ್ಯೆ 638, ರಾಜಾಜಿನಗರ 2ನೇ ಹಂತ
ಡಾ. ರಾಜಕುಮಾರ್ ರಸ್ತೆ, ಬೆಂಗಳೂರು - 560 010
ಮಾಲೀಕರು: **ವಿಘ್ನೇಶ್** Mob. 8884569831

***Best wishes :***

**M/S MOBILE CORNER**
734, New Masjid Road, T.Dasarahalli,
Benagaluru 560057
**Mob: 9844408408**

*ನೂತನ ಪತ್ರಿಕೆಗೆ ಶುಭಾಶಯಗಳು*

**Sri Sri Jayachamarajendra Odeyar**
**Auto Drivers & Owners Association,**
Hebbal Ind. Area, Electronic City, Mysore-16.
President : Shekar Mob. : 9379174765

***Best wishes :***

**M/S AKSHY COMPUTERS**
736, Gopu Store Building, New Masjid Road,
T.Dasarahalli, Bengaluru 560057
**Mob: 9964293839 / 9886219256**

*ಮಹಿಳಾ ವಿಶೇಷ ವಾರಪತ್ರಿಕೆಗೆ ಶುಭಾಶಯಗಳು*

**KARNATAKA SAREE CENTRE**
955, Zoo Garden Main Road, Ittigegud, Mysore-10
Wholesale Dealers:
**Kanchi, Dharmavaram, Polycotton and all kinds of Fancy Sarees**
Contact: 2433985 / 2521927 / 4276685


Edited, Published & Owned by H.V.Venkatasubbarao, #1021, 14th Cross, 2nd Stage, Hebbal, Mysore-570017 and Printed at Annapoorna Offset Printer, #511, 14th Main, Saraswathipuram, Mysore-570009. Bangalore Office:#734, New Masjid Road, Near Metro Statn., T.Dasarahalli, Bangalore-560057 Mob.:8880334444,Email:mahilavishesha@yahoo.com Editor: H.V. Venkatasubbarao, Reg.No.: MAG.90/2015-16